ಓ.ಎಸ್ ನಂ.56/2022

ಪಿ.ಡಬ್ಲ್ಯೂ-1 ಭಾಗ್ಯಜ್ಯೋತಿ ತಂದೆ ಸಿದ್ದಣ್ಣ

**(ಇಂದು ದಿನಾಂಕಃ 17-09-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)**

ಪಾಟೀ ಸವಾಲುಃ ೭ ಮತ್ತು ೮ನೇ ಪ್ರತಿವಾದಿಗಳ ಪರ ಶ್ರೀ ಕೆ ಜಿ ಪಿ ವಕೀಲರಿಂದ.

ನಮ್ಮ ಮನೆತನಕ್ಕೆ ಸರ್ವೆ ನಂ.132/3 ರ ೧೧ ಎಕರೆ ಜಮೀನು, ಸರ್ವೆ ನಂ.119 ರ ೧೬ ಎಕರೆ ಜಮೀನು, 2-25 ಗತ್ತರಗಿಯಲ್ಲಿರುವ ಮನೆ ಮತ್ತು 19-339 ಮಂಗಳುರಲ್ಲಿರುವ ಮನೆ ಮತ್ತು 4-15 ಘತ್ತರಗಿಯಲ್ಲಿರುವ ಪ್ಲಾಟ ಆಸ್ತಿಗಳು ನಮ್ಮ ಮನೆತನಕ್ಕೆ ಸೇರಿರುತ್ತವೆ. ನನ್ನ ತಂದೆ ಸಿದ್ದಣ್ಣರವರಿಗೆ ಶಂಕರ, ಚಿಂತರಾಯ, ಗೊಳ್ಳಾಲ, ಮತ್ತು ಶೀಲೆದಾರ ಎಂದ ಸಹೋದರರು ಮತ್ತು ಬಾಗಮ್ಮ ಎಂಬ ಒಬ್ಬ ಸಹೋದರಿ ಇರುತ್ತಾರೆ. ನನ್ನ ತಂದೆ ಸಿದ್ದಣ್ಣರವರಿಗೆ ೨ ಜನ ಹೆಂಡತಿಯರು ಇರುತ್ತಾರೆ. ೩ನೇ ಪ್ರತಿವಾದಿ ಬಸಮ್ಮ ನಮ್ಮ ತಂದೆಯ ಮೊದಲನೆಯ ಹೆಂಡತಿಯಾಗಿರುತ್ತಾರೆ. ೨ನೇ ವಾದಿಯಾದ ಬೌರಮ್ಮರವರು ನನ್ನ ತಂದೆಯ ೨ನೆಯ ಹೆಂಡತಿ ಆಗಿರುತ್ತಾರೆ. ೨ನೇ ಮದುವೆಯಾಗಲು ನಮ್ಮ ತಂದೆ ಮೊದಲನೆಯ ಹೆಂಡತಿಯ ಒಪ್ಪಿಗೆ ಪಡೆದ ಬಗ್ಗೆ ನನಗೆ ಗೊತ್ತಿಲ್ಲ.

೨. ದಾವಾ ಆಸ್ತಿಗಳ ಚೆಕ್ಕುಬಂದಿಗಳನ್ನು ನನಗೆ ಹೇಳಲು ಗೊತ್ತಿಲ್ಲ. ಜಮೀನುಗಳು ಪಾಲುವಾಟ್ನಿ ಆಗಿರುತ್ತವೆ ಎಂದರೆ ಸರಿ. ಸಾಕ್ಷಿ ನಂತರ ಪಾಲು ಆಗಿರುವುದಿಲ್ಲ ಎನ್ನುತ್ತಾರೆ. ನಮ್ಮ ಪಾಲಿನ ಜಮೀನನ್ನು ನಾವು ೫ನೇ ಪ್ರತಿವಾದಿಯಾದ ಗೊಲ್ಲಾಳರವರಿಗೆ ಮಾಡಲು ಹಚ್ಚಿರುತ್ತೇವೆ. ಅದು ೪ ಎಕರೆ ಜಮೀನು ಇರುತ್ತದೆ. ಪ್ರತಿವರ್ಷಕ್ಕೆ ಎಪ್ಪತ್ತು ಸಾವಿರ

ರೂಪಾಯಿ ನೀಡುವ ಕರಾರಿನ ಮೇಲೆ ಆ ರೀತಿ ಜಮೀನು ಮಾಡಲು ಹಚ್ಚಿರುತ್ತೇವೆ. ಸದರಿ ನಮ್ಮ ಪಾಲಿನ ಜಮೀನು ೪ ಎಕರೆ ಇದ್ದು ಅದು ಸರ್ವೆ ನಂ.132/3 ರಲ್ಲಿ ಇರುತ್ತದೆ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.